# ತೇಪೆ ಜೀನ್ಸ್..!

ತೇಪೆ ಹಾಕಿದ ಜೀನ್ಸ್ ಈ ದಿನಮಾನದ ಫ್ಯಾಷನಬಲ್ ಉಡುಪುಗಳಲ್ಲಿ ಒಂದು. ಬಣ್ಣ ಬಣ್ಣದ ಹೂಗಳಿಂದ ಹಿಡಿದು ಆಧುನಿಕ ಕಲೆಯವರೆಗೆ ಹಲವು ಸಂಕೇತಗಳಿಗೆ ಭಿತ್ತಿಯಾಗಿರುವ ತೇಪೆಗಳು ಅಮೆರಿಕದ ಪ್ರತಿ ಸಂಸ್ಕೃತಿಯನ್ನು ಅಡಗಿಸಿಟ್ಟುಕೊಂಡಿರುವುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ.

★ **ವಿಶಾಖ ಎನ್.**




ಬಾಲ್ಯದಲ್ಲಿ ಕಂಡ ನೆನಪು. ಊರೆಂದ ಮೇಲೆ ಒಬ್ಬ ಹುಚ್ಚ ಇರಲೇಬೇಕಿತ್ತು. ಮಾನಸಿಕ ಸ್ವಾಸ್ಥ್ಯ ಸರಿ ಇಲ್ಲದಿದ್ದರೂ ಅವನು ಮನುಷ್ಯ ವಿರೋಧಿಯೋ, ಕ್ರೂರಿಯೋ, ವಿಕೃತನೋ ಆಗಿರಲೇಬೇಕು ಎಂದೇನೂ ಇಲ್ಲ. ಅಂಥ ಒಬ್ಬ ಹುಚ್ಚನ ಹತ್ತಿರ ಸೂಜಿದಾರ ಸದಾ ಇರುತ್ತಿತ್ತು. ಕಿಗ್ಗಲನಾಮ ಸಂವತ್ಸರದ ಅವನ ಮಾಸಲು ಬಣ್ಣದ ಅಂಗಿ ಹರಿದೆಡೆಯೆಲ್ಲ ಒಂದೊಂದು ತೇಪೆ. ದರ್ಜಿ ಕತ್ತರಿಸಿ ಬಿಸಾಕಿದ ಯಾವುದೋ ಬಣ್ಣದ ತುಂಡಿನ ಬಟ್ಟೆ ಅವನ ಅಂಗಿಗೆ ತೇಪೆ ಆಗುತ್ತಿತ್ತು. ಟಾರ್ಪಾಲ್ ನಂಥ ಬಟ್ಟೆಯದ್ದಂಥಾಗಿದ್ದ ಅವನ ಅಂಗಿ ಮೇಲಿನ ತೇಪೆಗಳಿಗೆ ಸಮಕಾಲೀನ ಸ್ಪರ್ಶ. ಸ್ಪನ್, ಹತ್ತಿ, ಮಕಮಲ್ಲು ಹೀಗೆ ಮೆಟೀರಿಯಲ್ ನಲ್ಲೂ ವೈವಿಧ್ಯ. ವರ್ಣರಂಜಿತವೂ ಹೌದು.

ಮಾನಸಿಕ ಸ್ವಾಸ್ಥ್ಯ ಸರಿ ಇಲ್ಲದ ಕಾರಣಕ್ಕೆ ಅವನನ್ನು ಫ್ಯಾಷನ್ ರಾಯಭಾರಿ ಎಂದು ಯಾರೂ ಕರೆಯುತ್ತಿರಲಿಲ್ಲ. ಇತಿಹಾಸದ ಪುಟಗಳ ಪ್ರತಿಸಂಸ್ಕೃತಿಯ ಜಾಯಮಾನವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಲ್ಲಿಯೂ ಇಂಥದ್ದೇ ಒಂದು ವಸ್ತ್ರವಿಲಕ್ಷಣದ ಕವಲು ಕಾಣುತ್ತದೆ. ಯಾರು ಅಘೋಷಿತ ನಿಬಂಧನೆ ಮೀರಿದ ವಿನ್ಯಾಸಗಳ ವಸ್ತ್ರಗಳನ್ನು ಧರಿಸುವರೋ ಅವರನ್ನು 'ವಸ್ತ್ರವಿಲಕ್ಷಣಿ'ಗಳು ಎಂದು ವಸ್ತ್ರಸಂಹಿತೆಯ ಒಪ್ಪಿತ ಮನಸ್ಸುಗಳು ಕರೆಯುತ್ತಿದ್ದವು.

ಹೊಸ ಕಾಲದ ಜೀನ್ಸ್ ಗಳನ್ನು ಗಮನಿಸಿದರೆ ಹಳೆಕಾಲದ ಈ ವಸ್ತ್ರವಿಲಕ್ಷಣಿಗಳು ಕಣ್ಣಮುಂದೆ ಹಾದು ಹೋದಾರು. ಪೇಂಟರ್ ಗಳಂಥ ಶ್ರಮಜೀವಿಗಳಿಗೆ ಅನುಕೂಲವಾಗಲಿ ಎಂದು ತಯಾರಾದ ಜೀನ್ಸ್ ಪ್ಯಾಂಟ್, ಜಾಕೆಟ್ ಗಳು ಪ್ರತಿಸಂಸ್ಕೃತಿಯೊಂದರ ರೂಪಕವಾಗಿ ಆಧುನಿಕ ಕಾಲದಲ್ಲಿ ಬದಲಾಗಿಬಿಟ್ಟಿತು. ಹಿಂದೆ ಹಾಕಿಕೊಂಡು, ಹರಿಯುತ್ತಿದ್ದರು. ಈಗ ಅಲ್ಲಲ್ಲಿ ಹರಿದದ್ದನ್ನು ಹಾಕಿಕೊಳ್ಳುವುದು ಫ್ಯಾಷನ್. ಪ್ಯಾಂಟ್ ಅಥವಾ ಜಾಕೆಟ್ ಎಲ್ಲೆಲ್ಲಿ ಹರಿದಿರಬೇಕು ಎಂದು ನಿರ್ಧರಿಸುವ ಫ್ಯಾಷನ್ ಪಂಡಿತರಿದ್ದಾರೆ. ಅದರಲ್ಲಿ 'ಸೆಕ್ಸ್ ಅಪೀಲ್'ನ ನವತತ್ವವೊಂದು ಅಡಕವಾಗಿದೆಯಂತೆ. ಡೆನಿಮ್ ಬಗೆಯ ವಸ್ತ್ರಗಳನ್ನು ಮಾರುಕಟ್ಟೆ ಮಾಡುವವರು ಕಾಲಕಾಲಕ್ಕೆ ಇಂಥ ತತ್ವ ಎಸೆಯುವ ವಸ್ತ್ರ ವಿನ್ಯಾಸಕಾರರ ತಲೆ ನೇವರಿಸುತ್ತಲೇ ಇರುತ್ತಾರೆ.